ಮೊಮೆಂಟೂಗಳು ಮತ್ತು ಎವಾರ್ಡುಗಳನ್ನು ಕಲಕ್ಕೆ ಮಾಡಿ ಇರಲಾಗಿದೆ.

3) ಡಾ॥ ಕಾರಂತರ ಮನೆಯಲ್ಲಿ ಮತ್ತು ಉಡುಪಿಯಲ್ಲಿ ಗೀತ ನಾಟಕಗಳ ಮತ್ತು ಯಕ್ಷಗಾನ ಹಾಡುಪಿಕೆ ಮತ್ತು ಪಾತ್ರಕ್ಕಿಕ್ಕಗಳ ಆಡಿಯೋ ಮತ್ತು ವಿಡಿಯೋಗಳ ಕ್ಯಾಸೆಟುಗಳನ್ನು ಕಾರಂತ ಪೀತವ ಸದಸ್ಯರಿಂದ ತಯಾರಿಸಿದೆ.

ಈ) ಇಲ್ಲ.

ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯ ದುರಸ್ಥಿ

743 - ಶ್ರೀ ಇ. ಮಾರುತಿರಾವ್ ಪವರ್ (ನರಸಿಂಹರಾಜ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿರುವ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯ ಸರ್ಕಾರಿ ಶವಾಗಾರವು ಹೊಸ ಕಟ್ಟಡಕ್ಕೆ ಬದಲಾವಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಕಟ್ಟಡದಲ್ಲಿ ಶವಗಳು ಕೆಡದಂತೆ ಇಡಲು ಶೈತ್ಯಾಗಾರ ಇಲ್ಲವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ತಕ್ಷಣ ಇವರ ವ್ಯವಸ್ಥೆ ಮಾಡಲು ಸರ್ಕಾರದವರ ಕ್ರಮ ಕೈಗೊಳ್ಳುವರೇ?

ಶ್ರೀ ವಿ.ಪಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಹೌದು.

ಆ) ಹೌದು.

ಇ) ಈಗಾಗಲೇ ಶೈತ್ಯಾಗಾರ ಯಂತ್ರಗಳನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸಿದ್ದು ವಿದ್ಯುತ್ ಸಂಪರ್ಕ ಕಲ್ಪಿಸುವ ಕಾರ್ಯ ನಡೆಯುತ್ತಿದ್ದು ಸದ್ಯದಲ್ಲಿಯೇ ಈ ಸೇವೆಯನ್ನು ಪ್ರಾರಂಭಿಸಲಾಗುವುದು.

ವಿದ್ಯಾರ್ಥಿಗಳ ಸುಳ್ಳು ದಾಖಲಾತಿ ನೀಡಿ ಸರ್ಕಾರದ ಹಣಕ್ಕೆ ವಂಚಿಸುತ್ತಿರುವ ಶಿಕ್ಷಣ ಸಂಸ್ಥೆಗಳು

744 - ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಿದ್ಯಾರ್ಥಿಗಳ ಸುಳ್ಳು ಮಾಹಿತಿಗಳನ್ನು ನೀಡಿ ಸರ್ಕಾರದ ಧನ ಸಹಾಯವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಎಂಟು ಶಿಕ್ಷಣ ಸಂಸ್ಥೆಗಳ ಮಾನ್ಯತೆಯನ್ನು ರದ್ದುಪಡಿಸಲಾಗಿದೆಯೇ?

ಆ) ಹಾಗಿದ್ದಲ್ಲಿ, ಆ ಶಿಕ್ಷಣ ಸಂಸ್ಥೆಗಳ ಹೆಸರುಗಳೇನು? ದುರುಪಯೋಗವಾದ ಹಣವನ್ನು ವಸೂಲು ಮಾಡಲಾಗಿದೆಯೇ?

ಶ್ರೀ ಮಹ್.ಜಿ. ಗೂಳಿಂದಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ವಿಶ್ವ ಬ್ಯಾಂಕ್ ನೆರವಿನಿಂದ ಪಾಲಿಟೆಕ್ನಿಕ್ ಅಭಿವೃದ್ಧಿ

745 - ಶ್ರೀ ಗ. ಮಾರುತಿರಾವ ಪವಾರ (ಸರ-ಎಮರಾಜ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಡುವರೆಗೂ ವಿಶ್ವಬ್ಯಾಂಕಿನಿಂದ ಪಾಲಿಟೆಕ್ನಿಕ್ ಅಭಿವೃದ್ಧಿಗಾಗಿ ಎಷ್ಟು ಹಣ ಬಂದಿದೆ. ಆ ಹಣವನ್ನು ಯಾವ ಯಾವ ಕಾಲೇಜಿನ ಅಭಿವೃದ್ಧಿಗಾಗಿ ಕೊಟ್ಟಿದೆ.

ಆ) ಅಭಿವೃದ್ಧಿಯ ಕಾರ್ಯವನ್ನು ಸರ್ಕಾರ ಪರಿಶೀಲಿಸಿದೆಯೇ?

ಶ್ರೀ ಡಿ. ಮಂಜುನಾಥ (ಉನ್ನತ ಶಿಕ್ಷಣ ಸಚಿವರು) :

ಅ) ಪಾಲಿಟೆಕ್ನಿಕ್ ಹಂತದಲ್ಲಿ ತಾಂತ್ರಿಕ ಶಿಕ್ಷಣದ ಗುಣಮಟ್ಟ ಬಲಪಡಿಸಲು ರೂ. 4660-00 ಲಕ್ಷ ಮೊತ್ತದ ವಿಶ್ವ ಬ್ಯಾಂಕ್ ಯೋಜನೆಯನ್ನು 1990-91ನೇ ಸಾಲಿನಿಂದ ರಾಜ್ಯದ ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕಗಳಲ್ಲಿ ಅನುಷ್ಠಾನಕ್ಕೆ ತರಲಾಗಿದೆ. ಸದರಿ ಯೋಜನೆಯಲ್ಲಿ ಜನವರಿ 1996ರ ಅಂತ್ಯದವರಗೆ ರೂ. 2878.00 ಲಕ್ಷ ಹಣ ಖರ್ಚಾಗಿದ್ದು ಇದುವರೆಗೂ ರೂ. 1978.64 ರಷ್ಟು ಹಣ ವಿಶ್ವಬ್ಯಾಂಕಿನಿಂದ ರಾಜ್ಯ ಸರ್ಕಾರಕ್ಕೆ ಮರುಪಾವತಿಯಾಗಿದೆ.

ರಾಜ್ಯದಲ್ಲಿ ಪ್ರೌಢಶಾಲೆಗಳ ಮಂಜೂರಾತಿ

746 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96ನೇ ಸಾಲಿನಲ್ಲಿ ರಾಜ್ಯದಲ್ಲಿ ಮಂಜೂರಾದ ಪ್ರೌಢಶಾಲೆಗಳು ಯಾವುವು (ಮಂಜೂರಾದಲ್ಲಿ ವಿವರ ತಿಳಿಸುವುದು)

ಆ) ಹಾಗಿಲ್ಲದಿದ್ದಲ್ಲಿ 1996-97ನೇ ಸಾಲಿನಲ್ಲಿ ಎಷ್ಟು ಪ್ರೌಢಶಾಲೆಗಳು ಮಂಜೂರು ಮಾಡುವ ಯೋಜನೆ ಸರಕಾರದ ಮುಂದಿದೆ.

ಇ) ಹಾಗಿದ್ದಲ್ಲಿ ಯಾವ ಯಾವ ಕಡೆಗಳಲ್ಲಿ ಮಂಜೂರು ಮಾಡಲಾಗುವುದು.

ಶ್ರೀ ಮಹ್. ಜಿ. ಗೂಳಿಂದಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) 1995-96ನೇ ಸಾಲಿನಲ್ಲಿ ರಾಜ್ಯದಲ್ಲಿ ಹೊಸದಾಗಿ ಯಾವುದೇ ಸರ್ಕಾರಿ ಪ್ರೌಢಶಾಲೆಗಳು ಮಂಜೂರಾಗಿರುವುದಿಲ್ಲ.